**ಕರ್ನಾಟಕ ಸರ್ಕಾರ**

ಸಂಖ್ಯೆ:ಪೌನಿ:ಎಂಐಆರ್‌ಸಿಜಿಐಎಸ್:ಸಿಆರ್84:2007-08

ಪೌರಾಡಳಿತ ನಿರ್ದೇಶನಾಲಯ,
ಪೌರ ಸುಧಾರಣಾ ಕೋಶ, MNSMC
6ನೇ ಮಹಡಿ, ಐಟಿ ಪಾರ್ಕ್,
ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್,
ಬೆಂಗಳೂರು-44, ದಿನಾಂಕ 31.1.2008

**: ಸುತ್ತೋಲೆ:**

ವಿಷಯ: ನಿರ್ಮಲ ನಗರ ಪಟ್ಟಣಗಳಲ್ಲಿ Street Sign Board ಮತ್ತು Door No. ಪ್ಲೇಟ್ ಅಳವಡಿಸುವ ಕುರಿತು

******

ರಾಜ್ಯದ 49 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿರ್ಮಲ ನಗರ ಯೋಜನೆಯಡಿ, ಭೌಗೋಳಿಕ ಮಾಹಿತಿ ವ್ಯವಸ್ಥೆಯ ಆಧಾರದ ಮೇರೆ ಆಸ್ತಿ ತೆರಿಗೆಯ ಗಣಕೀಕರಣ ಕಾರ್ಯ ನಿರ್ವಹಿಸಿದ್ದು, ಈಗಾಗಲೇ online ಆಗಿರುವ ಪ್ರದೇಶಗಳಲ್ಲಿನ ರಸ್ತೆಗಳಿಗೆ ರಸ್ತೆ ಸೂಚನಾ ಫಲಕ ಮತ್ತು ಎಲ್ಲಾ ಮನೆಗಳಿಗೆ ಮನೆ ಸಂಖ್ಯೆಯ ಲೋಹದ ಪ್ಲೇಟನ್ನು ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ ಅಳವಡಿಸಲು ತಿಳಿಸಲಾಗಿದೆ.

## I. ವಸತಿ ಮತ್ತು ವಾಣಿಜ್ಯ ಕಟ್ಟಡಗಳಿಗೆ Door No. ಪ್ಲೇಟ್ ಅಳವಡಿಸುವ ಬಗ್ಗೆ.

ಪ್ರತಿಯೊಂದು ವಸತಿ, ವಾಣಿಜ್ಯ ಮತ್ತು ಕೈಗಾರಿಕಾ ಕಟ್ಟಡಗಳಿಗೆ Door No. ಪ್ಲೇಟ್‌ಗಳನ್ನು ಹಾಕಿಸಿ ಅವುಗಳ ಮೇಲೆ Door No. ಅನ್ನು ಮಾತ್ರ ನಮೂದಿಸಬೇಕು.

**ಉದಾಹರಣೆ**: ಒಂದು ಮನೆಯ Property ID 5-2-101-320 ಆಗಿದ್ದರೆ, ಆ ಮನೆಯ ಮನೆ ಸಂಖ್ಯೆ ಪ್ಲೇಟ್‌ನಲ್ಲಿ 320 ನ್ನು ಮಾತ್ರ ನಮೂದಿಸಬೇಕು. ಅನುಬಂಧ-I ರಲ್ಲಿ ಉದಾಹರಣೆಗಾಗಿ ಮಾದರಿಯನ್ನು ತಿಳಿಸಲಾಗಿದೆ.

## II. ರಸ್ತೆ ನಾಮಫಲಕಗಳನ್ನು ಅಳವಡಿಸುವ ಬಗ್ಗೆ

ರಸ್ತೆ ನಾಮಫಲಕಗಳನ್ನು ಸಿದ್ಧಪಡಿಸಿ ರಸ್ತೆ ತಿರುವುಗಳಲ್ಲಿ ಅಳವಡಿಸುವ ಕುರಿತಂತೆ ಕೆಳಕಂಡ ಕ್ರಮಗಳನ್ನು ಅನುಸರಿಸುವಂತೆ ಸೂಚಿಸಿದೆ.

- ನಗರ ಅಥವಾ ಪಟ್ಟಣದಲ್ಲಿ ಮಾರ್ಗದರ್ಶಿ ಫಲಕ ಕಂಬವನ್ನು ನೆಡುವಂತಹ ರಸ್ತೆ ಛೇದಕ ಬಿಂದುವನ್ನು ಆಯ್ಕೆ ಮಾಡುವುದು.
- ರಸ್ತೆ ನಾಮಫಳಕಗಳನ್ನು ಕೆಳಕಂಡ 3 ಮಾದರಿಯಲ್ಲಿ ನಿರ್ಮಿಸಬಹುದು

1. ಕಂಬಗಳ ಮೇಲೆ ಅಳವಡಿಸಬಹುದಾದ ರಸ್ತೆ ಫಲಕಗಳು.
2. ಗೋಡೆಯ ಮೇಲೆ ಹಾಕುವಂಥಹ ರಸ್ತೆ ಫಲಕಗಳು
3. ಸಣ್ಣ ಕಾಂಕ್ರೀಟ್ ಸಂಕೇತ ಫಲಕಗಳು

ಅನುಬಂಧ-III ರಲ್ಲಿ ಮಾದರಿಯನ್ನು ತಿಳಿಸಲಾಗಿದೆ.

O/C

ಕ್ರಮಸಂಖ್ಯೆ...309...ರಲ್ಲಿ ದಿನಾಂಕ.14/02/08.ರಂದು ರವಾನಿಸಲಾಗಿದೆ.

- ಪ್ರತಿಯೊಂದು ರಸ್ತೆಗೆ ಯಾವ ಬಗೆಯ ಫಲಕವನ್ನು ಉಪಯೋಗಿಸಿ ಕೊಳ್ಳಬೇಕೆಂಬುದನ್ನು ಆಯ್ಕೆ ಮಾಡಿಕೊಳ್ಳಲು ಆ ರಸ್ತೆಯ ಮಹತ್ವವನ್ನು ಗುರುತಿಸಿ ಅಳವಡಿಸತಕ್ಕದ್ದು.

ಉದಾಹರಣೆಗೆ:- ನಗರದ ಕೇಂದ್ರ ಭಾಗದಲ್ಲಿ ತಕ್ಕಂತಹ ಸ್ಥಳಗಳಲ್ಲಿ ಗೋಡೆಗಳ ಮೇಲೆ ಹಾಕತಕ್ಕಂತಹ ಫಲಕಗಳನ್ನು ಹಾಕಬೇಕು. ಕಡಿಮೆ ಸಂಚಾರದ ದಟ್ಟಣೆ ಇರುವಂಥ ಅತಿ ಸಣ್ಣ ವಸತಿ ಪ್ರದೇಶದ ಸಮೀಪದಲ್ಲಿರುವ ಬ್ಲಾಕುಗಳಲ್ಲಿ ಕಾಂಕ್ರೀಟಿನ ಸಣ್ಣ ಫಲಕದ ಕಂಬಗಳನ್ನು ಅಳವಡಿಸತಕ್ಕದ್ದು.

- ನಗರ ಸ್ಥಳೀಯ ಸಂಸ್ಥೆಯ ತಾಂತ್ರಿಕ ಶಾಖೆಯು ಈ ಕಾರ್ಯದ ಉಸ್ತುವಾರಿಯನ್ನು ವಹಿಸಿಕೊಳ್ಳತಕ್ಕದ್ದು. ಆರಂಭಿಕ ಸ್ಥಾಪನೆ ಮತ್ತು ಮುಂದುವರಿಯುತ್ತಿರುವ ನಿರ್ವಹಣೆ ವೆಚ್ಚಗಳನ್ನು ಸರಿದೂಗಿಸಲು ನಗರದಲ್ಲಿರುವ ದೊಡ್ಡ ನಿಗಮಗಳ ಜಾಹೀರಾತುಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವುದು.
- ದುಬಾರಿ ಬೆಲೆಯ ಮಾರ್ಗದರ್ಶಿ ಫಲಕದ ಕಂಬಗಳ ವೆಚ್ಚವನ್ನು ನಿಯಂತ್ರಿಸುವ ಸಲುವಾಗಿ ಜಾಹಿರಾತು ಭಾಗವನ್ನು ಮಾರ್ಗದರ್ಶಿ ಫಲಕದ ಕೆಳಭಾಗದಲ್ಲಿ ನಮೂದಿಸತಕ್ಕದ್ದು. ಫಲಕ ಕಂಬಗಳ ಮಾದರಿಯನ್ನು ಅನುಬಂಧ-1V ರಲ್ಲಿ ತಿಳಿಸಲಾಗಿದೆ.
- ಮಾರ್ಗದರ್ಶಿ ಫಲಕಗಳ ಸ್ಥಳಗಳನ್ನು ಗುರುತಿಸಲು GIS ನ ನಕ್ಷೆಗಳನ್ನು ಉಪಯೋಗಿಸಿಕೊಳ್ಳಬೇಕು ಮತ್ತು ಅದರ ವೆಚ್ಚ ಮತ್ತು ರಚನೆಯು ಸ್ಥಳದ ಪ್ರಾಮುಖ್ಯತೆಯನ್ನು ಅವಲಂಬಿಸಿರಬಹುದು.
- ಕಾಲ ಕಾಲಕ್ಕೆ ನಗರ/ಪಟ್ಟಣಗಳಲ್ಲಿ ವಾರ್ಡ್‌ಗಳ ಮರುವಿಂಗಡಣಾ ಕಾರ್ಯ ನಡೆಯುವುದರಿಂದ ವಾರ್ಡ್‌ಗಳ ಸರಹದ್ದು ಬದಲಾವಣೆಗೊಳ್ಳುತ್ತಿರುತ್ತವೆ. ಈ ತೊಂದರೆಯನ್ನು ನಿವಾರಿಸಲು ವಾರ್ಡ್‌ಗಳನ್ನು ಪ್ರದೇಶಗಳೆಂದು(Area) ಭಾವಿಸಿ ಫಲಕದಲ್ಲಿ ವಾರ್ಡ್ ನಂಬರ್ ಬದಲು ಪ್ರದೇಶ ನಂಬರನ್ನು ಬರೆಸತಕ್ಕದ್ದು. ಉದಾಹರಣೆಗೆ:- ಅನುಬಂಧ II ನ್ನು ಅವಲೋಕಿಸುವುದು.
- ಮಾರ್ಗದರ್ಶಿ ಫಲಕಗಳ ಮೇಲೆ ರಸ್ತೆಯ ಹೆಸರು,ರಸ್ತೆಯ ನಂಬರ್, ಬ್ಲಾಕ್ ನಂಬರ್, ಪ್ರದೇಶ ನಂಬರ್ ಮತ್ತು ಆ ರಸ್ತೆಯಲ್ಲಿ ಆರಂಭಗೊಳ್ಳುವ ಮತ್ತು ಕೊನೆಗೊಳ್ಳುವ ಆಸ್ತಿ ಸಂಖ್ಯೆಗಳನ್ನು (With direction symbol) ಕನ್ನಡದಲ್ಲಿ ಬರೆಯಿಸಬೇಕು. ಉದಾಹರಣೆ ಅನುಬಂಧ II ನ್ನು ಪರಿಶೀಲಿಸುವುದು
- ಸಂಕೇತವು ಹಗಲು ಮತ್ತು ರಾತ್ರಿ ವೇಳೆಯಲ್ಲಿ ಪಾದಚಾರಿಗಳಿಗೆ ಮತ್ತು ಮೋಟಾರು ಸವಾರುದಾರರಿಗೆ ಸ್ಪಷ್ಟವಾಗಿ ಕಾಣುವ ಹಾಗೆ ಮತ್ತು ಮಾರ್ಗದರ್ಶಿ ಫಲಕಗಳು ದೊಡ್ಡ ವಾಹನಗಳಿಂದ ನಾಶವಾಗದ ರೀತಿಯಲ್ಲಿ ಸಾಧ್ಯವಾದಷ್ಟು ಎತ್ತರದಲ್ಲಿರುವಂತೆ ಅಳವಡಿಸತಕ್ಕದ್ದು.

ಅನುಬಂಧ I ರಿಂದ IV ನ್ನು ಇದರೊಂದಿಗೆ ಲಗತ್ತಿಸಿದೆ.

(ಸಹಿ)
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು

1. ನಿರ್ಮಲ ನಗರ ಪಟ್ಟಣಗಳಿಗೆ ಸಂಬಂಧಪಟ್ಟ ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿನ ಯೋಜನಾ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ನಿರ್ಮಲ ನಗರ ಪಟ್ಟಣಗಳ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಕಛೇರಿ ಪ್ರತಿ

## ಅನುಬಂಧ- I

## Door Number Plate size specification

**Plate Specification**

**Size – 200 X 100 mm**

# 3 2 0

## ಅನುಬಂಧ - II

ನಗರಸಭೆ ರಾಮನಗರ

ಪ್ರದೇಶ ಸಂಖ್ಯೆ-12, ಬ್ಲಾಕ್ ಸಂಖ್ಯೆ-1

**1 ನೇ ಎ ಅಡ್ಡರಸ್ತೆ**

→ ←

ಆಸ್ತಿ ಸಂಖ್ಯೆ – 51 ರಿಂದ 74B

ಮುಂದುವರೆದಿದೆ.

## ಅನುಬಂಧ - III

1. ಕಂಬಗಳ ಮೇಲಿನ ರಸ್ತೆ ಫಲಕಗಳು.

   I ) ನಾಮದರ್ಶಿ ಫಲಕದ ಎರಡೂ ಕಡೆಗಳಲ್ಲಿ ಗಣಕ ಯಂತ್ರದಿಂದ ವಿಕಾಸಗೊಂಡಿರುವ ಪ್ರತಿಫಲಿತ ಅಕ್ಷರಗಳಿರುವಂಥ (ಸ್ಟಿಕರ್‌ಗಳು) ಲೋಹದ ಕಂಬ. ಫಲಕದ ಕಂಬಗಳನ್ನು ಕೆಳಗಿನ ಚಿತ್ರದಲ್ಲಿ ತೋರಿಸಲಾದಂತೆ ಒಂದು ಛೇದಕ ಬಿಂದುವಿನ ಮೂಲೆಯಲ್ಲಿ ಅಳವಡಿಸುವುದು.

   II) ಮಾರ್ಗಸೂಚಿ ಫಲಕದ ಎರಡೂ ಕಡೆಗಳಲ್ಲಿ ಕೈಯಿಂದ ಬಣ್ಣ ಹಚ್ಚಿರುವ ಅಕ್ಷರಗಳಿರುವ ಲೋಹದ ಕಂಬ.

2. **ಗೋಡೆಯ ಮೇಲೆ ಹಾಕುವಂಥ ರಸ್ತೆ ಫಲಕಗಳು** – ಕಂಬಗಳನ್ನು ನೆಡಲು ಸ್ಥಳವಿಲ್ಲದಿರುವಂಥ ಜನದಟ್ಟಣೆಯ ನಗರ ಪ್ರದೇಶಗಳಲ್ಲಿ ಅಥವಾ ಕಿರಿದಾದ ರಸ್ತೆಗಳಲ್ಲಿ ಉಪಯುಕ್ತವಾಗುವುದು.

   I ) ಕೆತ್ತಿರುವ ಲೋಹದ ಅಥವಾ ಕಲ್ಲಿನ ಫಲಕಗಳು.

   II) ಬಣ್ಣದಲ್ಲಿ ಬರೆದಿರುವ ಸಂಕೇತಗಳು.

3. **ಸಣ್ಣ ಕಾಂಕ್ರೀಟ್ ಸಂಕೇತ ಫಲಕಗಳು** – ಕಡಿಮೆ ಸಂಚಾರ ಇರುವಂಥ ರಸ್ತೆಗಳಿಗೆ ಇದು ಉತ್ತಮವಾದುದು.



## ಅನುಬಂಧ – IV

## Signboard Size Specifications

# Road Sign Name




### Technical Specifications

**Location :** A Corner of a road intersection
**Note:** Bilingual Inscription
**Material:** HIG retro-reflective on 2mm thick Al sheeting.

### Advertising Specification

Size: 600x200 mm
Location: 100mm below sign

Design Specification
**Font:** Shree 855, Helvitica Bold
Font Height: 200 mm
Colour. French Blue: IS No:166

### Structural Specifications

**Foundation:** 300x300x600
1:2:4 Concerete
**Support:** MS Pipes 75 dia, 38dia, 25dia
**Fixing:** Welding & Revetting
**Ad Plate:** MS Plate

**Design Courtesy of BATF - Bangalore Agenda Task Force**